**ದಿಃ 29-05-2026** ರಂದು ಸಾಕ್ಷಿಯನ್ನು **ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ** ಅರ್ಜಿದಾರರ **ಪರ ಶ್ರೀ** ವಿ ಬಿ ಎಸ್ **ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿಯಾಗಿದ್ದು ಸತ್ಯವಾಗಿರುತ್ತವೆ.

ಹೊರರೋಗಿಗಳ ಚಿಕಿತ್ಸಾ ವರದಿಗಳನ್ನು ಒಟ್ಟಾಗಿ ನಿಪಿ-10, ಬಿಡುಗಡೆ ಪತ್ರವನ್ನು ನಿಪಿ-11, ರೆಡಿಯೋಲೆಜಿಸ್ಟ ವರದಿಯನ್ನು ನಿಪಿ-12, ಅರ್ಜಿದಾರಳ ಕೇಸ ಶೀಟನ್ನು ಹಾಜರ ಪಡಿಸಿದ್ದು ಅದನ್ನು ಒಟ್ಟಾಗಿ ನಿಪಿ-13, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ನೇ ಎದುರುದಾರರ ಪರಃ

(1 ನೇ ಎದುರುದಾರ ಏಕತರ್ಫಿ ಆಗಿದ್ದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಸಿ ಕೆ ವಕೀಲರಿಂದಃ

ಅರ್ಜಿದಾರಳು ದಿನಾಂಕ 28.08.2024 ರಂದು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದರು. ಅರ್ಜಿದಾರಳು ದಿನಾಂಕ 28.09.2024 ರಂದು ತುರ್ತುಚಿಕಿತ್ಸೆಗಾಗಿ ದಾಖಲಾಗಿದ್ದರು ಎಂದು ನಿಪಿ-14 ರಲ್ಲಿ ನಮೂದಿಸಲಾಗಿದೆ ಅಂದರೆ ಸಾಕ್ಷಿ ದಿನಾಂಕ ತಪ್ಪಾಗಿ ನಮೂದ ಆಗಿರುತ್ತದೆ ಅನ್ನುತ್ತಾರೆ. ನಿಪಿ-14 ನ್ನು ಕಿಮ್ಸ ಆಸ್ಪತ್ರೆಯ ವೈದ್ಯಾಧಿಕಾರಿಯಾಗಿ ನೀಡಿದ್ದೇನೆ. ಅಂಗನ್ಯೂನ್ಯತೆ ಪ್ರಮಾಣ ಪತ್ರದ ಸಲುವಾಗಿ ಕಿಮ್ಸ ಆಸ್ಪತ್ರೆಯಲ್ಲಿ ನಿಗದಿತ ನಮೂನೆಯ ಪ್ರಮಾಣ ಪತ್ರ ಇರುತ್ತದೆ ಅಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಯ ಲೇಟರಹೆಡ್ ಇರುತ್ತದೆ. ಆದರೆ ನಾನು ಸಹ ಕೊಡಬಹುದು. ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡು ನೀಡಬೇಕಾಗುತ್ತದೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಅನುಮತಿ ಪಡೆಯದೆ ನಿಪಿ-14 ರಂತೆ ಪ್ರಮಾಣ ಪತ್ರ ನೀಡಲು ಬರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-14 ನಮೂನೆಯಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಲು ಬರುವುದಿಲ್ಲ ಅಂದರೆ ಸರಿಯಲ್ಲ. ಗಾಯಾಳುವಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಅಂದರೆ ಸರಿಯಲ್ಲ. ಅರ್ಜಿದಾರಳಿಗೆ ನ್ಯಾಯಾಲಯಕ್ಕೆ ಬರಲು ನಾನು ತಿಳಿಸಿಲ್ಲ.

ಅರ್ಜಿದಾರಳು ದಿನಾಂಕ 28.08.2024 ರಂದು ದಾಖಲಾಗಿದ್ದು 16.09.2024 ರಂದು ಬಿಡುಗಡೆ ಆಗಿದ್ದಾಳೆ. ದಿನಾಂಕ 20.01.2026 ರಂದು ಅರ್ಜಿದಾರಳು ಅನರೋಗ್ಯದ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಪುನಃ ಬಂದಿದ್ದು ಅದಕ್ಕಿಂತ ಮುಂಚೆ ಕೂಡಾ ಹಲವಾರು ಸಲ ಬಂದು ಹೋಗಿರುತ್ತಾರೆ. ಅಪಘಾತವಾದ ಒಂದುವರೆ ವರ್ಷಗಳ ನಂತರ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಬಂದಿದ್ದಳು ಅಂದರೆ ನಿಜ. ಈ ಮದ್ಯದಲ್ಲಿ ಅರ್ಜಿದಾರಳು ಎಲ್ಲಿ ಚಿಕಿತ್ಸೆ ಪಡೆದಿದ್ದಾಳೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ದಾಖಲೆಗಳು ಗಾಯಳು ಹತ್ತಿರ ಇರುತ್ತಿದ್ದು ಅವುಗಳನ್ನು ನಾವು ಪಡೆದುಕೊಳ್ಳುವುದಿಲ್ಲ. ನಾನು ಅರ್ಜಿದಾರಳಿಗೆ ಚಿಕಿತ್ಸೆ ನೀಡಿದ್ದೇನೆ. ಹೊರರೋಗಿಗಳ ವಿಭಾಗದಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ರಜಿಸ್ಟರ ಇರುತ್ತದೆ ಅಂದರೆ ನಿಜ. ಅದನ್ನು ಹಾಜರ ಪಡಿಸಿಲ್ಲ. ಅರ್ಜಿದಾರಳು ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಪುನಃ ಚಿಕಿತ್ಸೆ ಸಲುವಾಗಿ ಎಂದಿಗೂ ಬಂದಿಲ್ಲ ಅಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಯಾವುದೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ.

ದಿನಾಂಕ 16.09.2024 ರ ನಂತರ ಅರ್ಜಿದಾರಳು ಎಲ್ಲಿಯೂ ಯಾವುದೆ ರೀತಿಯ ಚಿಕಿತ್ಸೆ ಪಡೆದಿಲ್ಲ ಅಂದರೆ ಸರಿಯಲ್ಲ. ದಿನಾಂಕ 20.01.2026 ರಂದು ಅರ್ಜಿದಾರಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಬಂದಿದ್ದು ಆ ಸಮಯದಲ್ಲಿ ಯಾವುದೆ ರೀತಿಯ ತೊಂದರೆ ಇರಲಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರಳಿಗೆ ಶಸ್ತ್ರ ಚಿಕಿತ್ಸೆ ನೇರವೇರಿಸಿ ಇಂಪ್ಲ್ಯಾಂಟ ಅಳವಡಿಸಿದ್ದು ಯಾವುದೆ ಶಾಶ್ವತವುಂಟಾಗುವುದಿಲ್ಲ ಅಂದರೆ ಸರಿಯಲ್ಲ. ನೋವು ತಾತ್ಕಾಲಿಕವಾಗಿ ಆ ಸಮಯದಲ್ಲಿ ಮಾತ್ರ ಇರುತ್ತದೆ ನಂತರ ಇರುವುದಿಲ್ಲ ಅಂದರೆ ಸರಿಯಲ್ಲ, ಅರ್ಜಿದಾರಳಿಗೆ ಮುಖಕ್ಕೆ ಆದ ಗಾಯಗಳಿಗಾಗಿ ಶೇ 32 ರಿಂದ 35 ರಷ್ಟು ಅಂಗನ್ಯೂನತೆ ಪ್ರಮಾಣ ನಿರ್ಧರಿಸಲು ಬರುವುದಿಲ್ಲ ಅಂದರೆ ಸರಿಯಲ್ಲ. ಮುಖಕ್ಕೆ ಆದ ಯಾವುದೆ ಗಾಯಗಳಿಗಾಗಿ ಅಂಗನ್ಯೂನತೆಯನ್ನು ನಿರ್ಧರಿಸಲು ಬರುವುದಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರಳಿಗೆ ಸಹಾಯ ಮಾಡುವ ಉದ್ದೇಶದಿಂದ ಶೇ 32 ರಿಂದ 35 ರಷ್ಟು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿದ್ದೇನೆ ಅಂದರೆ ಸರಿಯಲ್ಲ. ಇಡಿ ದೇಹಕ್ಕೆ ಹೋಲಿಸಿದಾಗ ಅರ್ಜಿದಾರಳಿಗೆ ಆದ ಅಂಗನ್ಯೂನ್ಯತೆ ಪ್ರಮಾಣ ಅಂದಾಜು ಶೇ 15 ರಿಂದ 17 ರಷ್ಟು ಆಗುತ್ತದೆ.

ನಾನು ಅರ್ಜಿದಾರಳಿಗೆ ಯಾವುದೆ ರೀತಿಯ ಚಿಕಿತ್ಸೆ ನೀಡಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರಳಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಹೆಚ್ಚಿನ ಪ್ರಮಾಣದ ಅಂಗನ್ಯೂನ್ಯತೆಯ ಪ್ರಮಾಣ ಪತ್ರ ನೀಡಿದ್ದೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲು: 4 ನೇ ಎದುರುದಾರರ ಪರ:</u>**

(2 ನೇ ಎದುರುದಾರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೇಳಿಕೊಂಡಿರುವುದರಿಂದ ಅಳವಡಿಸಿಕೊಳ್ಳಲಾಯಿತು)

**<u>ಪಾಟೀ ಸವಾಲು: 3 ನೇ ಎದುರುದಾರರ ಪರ:</u>**

ಏನು ಇಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**